ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5 Issue 2, September-October, 2023, Pp. 39-46.
©*IIMRD*, Mysuru
www.iimrd.com

# ಮಹಾ ಮಾನವತಾವಾದಿ ಬಸವಣ್ಣನವರ ಬಹುದೃಷ್ಟಿಯ ಚಿಂತನೆಗಳು

**ಡಾ. ಮಂಜುನಾಥ. ಬ. ಪಾಟೀಲ[*] ಮತ್ತು ಪ್ರೊ. ಪ್ರಕಾಶ. ಈ. ಸಿದ್ದನಗೌಡರ[**]**
*ಮುಖ್ಯಸ್ಥರು ಕನ್ನಡ ವಿಭಾಗ, ಪುರಸಭೆಯ ಪದವಿ ಕಲಾ ಮಹಾವಿದ್ಯಾಲಯ, ಲಕ್ಷ್ಮೇಶ್ವರ, ಗದಗ ಜಿಲ್ಲೆ.
**ಮುಖ್ಯಸ್ಥರು, ಶಿಕ್ಷಣಶಾಸ್ತ್ರ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಹಿರೇಕೆರೂರ, ಹಾವೇರಿ ಜಿಲ್ಲೆ.

**ಸಾರಾಂಶ: (Abstract)**

*ಪ್ರತಿಯೊಬ್ಬ ವ್ಯಕ್ತಿಗೂ ರಚನಾತ್ಮಕ ಶಕ್ತಿ ಅಭಿವ್ಯಕ್ತಗೊಳಿಸುವ ಅವಕಾಶವಿರುವುದರಿಂದ ಅವನು ಪ್ರಾಣಿಗಳಿಗಿಂತ ಭಿನ್ನ. ಮಾನವತಾವಾದವು ಸಹ ಇದನ್ನೇ ಹೇಳುತ್ತದೆ. ಪ್ರತಿಯೊಬ್ಬ ವ್ಯಕ್ತಿಗೂ ತನ್ನಲ್ಲಿಯ ರಚನಾತ್ಮಕ ಶಕ್ತಿಗಳನ್ನು ವ್ಯಕ್ತಗೊಳಿಸಲು ಮುಕ್ತ ಅವಕಾಶಗಳನ್ನು ಕಲ್ಪಿಸಿಕೊಡುವ ಸಿದ್ಧಾಂತವೇ ಮಾನವತಾವಾದ. ಮಾನವತಾವಾದವು ಮನುಷ್ಯನ ಮತ್ತು ಸಮಾಜದ ಬದಲಾಗುತ್ತಿರುವ ಬೇಡಿಕೆಗಳಿಗೆ ಪ್ರಾಧಾನ್ಯತೆ ನೀಡುವ, ಜೀವನದ ಬಗೆಗಿನ ಹೊಣೆಗಾರಿಕೆಯನ್ನು ಸ್ವೀಕರಿಸುವ ಒಂದು ವಿಶಿಷ್ಟ ಮನೋಭಾವವಾಗಿದೆ. ಈ ಸಿದ್ಧಾಂತದ ತಳಹದಿಯ ಮೇಲೆ 19ನೇ ಶತಮಾನದಲ್ಲಿ ಒಂದು ಪ್ರಗತಿಶೀಲ ಸಮಾಜ ಕಟ್ಟಲು ಜಗತ್ತಿನ ಮೇದಾವಿಗಳು ಪ್ರಯತ್ನಿಸಿದರು. ಇಪ್ಪತ್ತೊಂದನೆಯ ಶತಮಾನದಲ್ಲಿ ಜಾಗತಿಕ ಸಂಸ್ಥೆಗಳು ಚಿಂತನೆಮಾಡಿ ಆಚರಣೆಯಲ್ಲಿ ತರಲಿಚ್ಛಿಸುತ್ತಿರುವ ಮಾನವ ಕಲ್ಯಾಣದ ತತ್ವಗಳನ್ನು ಎಂಟನೂರು ವರ್ಷಗಳ ಹಿಂದೆಯೇ ಅಂದರೆ 12ನೇ ಶತಮಾನದಲ್ಲಿಯೇ ಬಸವೇಶ್ವರರು ಅನುಷ್ಠಾನದಲ್ಲಿ ತರಲು ಪ್ರಯತ್ನಿಸಿದುದು ಸೂರ್ಯನ ಪ್ರಕಾಶದಷ್ಟೇ ಸತ್ಯವಾದುದು.*

**ಮುಖ್ಯಪದಗಳು(Keywords):** ಬಸವಣ್ಣ, ವಚನ ಸಾಹಿತ್ಯ, ಶಿವಶರಣರು, ಸಮಾನತೆ, ಮಾನವತಾವಾದಿ.

**ಪೀಠಿಕೆ**

ಮಾನವತಾವಾದವು ಮನುಷ್ಯನ ಮತ್ತು ಸಮಾಜದ ಬದಲಾಗುತ್ತಿರುವ ಬೇಡಿಕೆಗಳಿಗೆ ಪ್ರಾಧಾನ್ಯತೆ ನೀಡುವ, ಜೀವನದ ಬಗೆಗಿನ ಹೊಣೆಗಾರಿಕೆಯನ್ನು ಸ್ವೀಕರಿಸುವ ಒಂದು ವಿಶಿಷ್ಟ ಮನೋಭಾವವಾಗಿದೆ. ಇದು ಸಮಾಜದ ಹಾಗೂ ಮಾನವ ಹಿತಾಸಕ್ತಿಗಳಿಗೆ ನ್ಯಾಯವನ್ನು ನೀಡಲು ಪ್ರಯತ್ನಿಸುತ್ತದೆ. 12 ನೇ ಶತಮಾನದಲ್ಲಿಯೇ ಬಸವಾದಿ ಶಿವಶರಣರು ವಚನ ಸಾಹಿತ್ಯದ ಮೂಲಕ ಸಮಸಮಾಜವನ್ನು ರೂಪಿಸಲು ಹೋರಾಟ ಮಾಡಿದರು.

***"ಮಾನವ ಜನ್ಮ ದೊಡ್ಡದು***
***ಇದ ಹಾನಿ ಮಾಡಲು ಬೇಡಿ***
***ಹುಚ್ಚಪ್ಪಗಳಿರಾ"***

*Please cite this article as: ಮಂಜುನಾಥ. ಬ. ಪಾಟೀಲ ಮತ್ತು ಪ್ರಕಾಶ. ಈ. ಸಿದ್ದನಗೌಡರ.* (2023). ಮಹಾ ಮಾನವತಾವಾದಿ ಬಸವಣ್ಣನವರ ಬಹುದೃಷ್ಟಿಯ ಚಿಂತನೆಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(2). ಪು.ಸಂ.* 39–46.

ಇದು ಶ್ರೀ ಪುರಂದರ ದಾಸರ ಕೀರ್ತನೆಗಳಲ್ಲಿಯೇ ಬಹುಮುಖ್ಯವಾದ ಕೀರ್ತನೆಯಾಗಿದೆ. ಈ ಪವಿತ್ರವಾದ ಮಾನವ ಕುಲದ ಶ್ರೇಷ್ಠತೆಯನ್ನು ಸಾರುವ ಸಂದೇಶ ಇದರಲ್ಲಿ ಅಡಗಿದೆ. ಎಂಬತ್ನಾಲ್ಕು ಲಕ್ಷ ಜೀವರಾಶಿಗಳಲ್ಲಿ ಅತ್ಯಂತ ಶ್ರೇಷ್ಠವಾದ ಜೀವಿ ಮಾನವ ಜೀವಿ. ಇಂತಹ ಮಾನವನ ಹಿತವೇ ಮಾನವತೆಯ ಮೂಲ ತತ್ವವಾಗಿದೆ. ಇಪ್ಪತ್ತೊಂದನೆಯ ಶತಮಾನದಲ್ಲಿ ಜಾಗತಿಕ ಸಂಸ್ಥೆಗಳು ಚಿಂತನೆಮಾಡಿ ಆಚರಣೆಯಲ್ಲಿ ತರಲಿಚ್ಛಿಸುತ್ತಿರುವ ಮಾನವ ಕಲ್ಯಾಣದ ತತ್ವಗಳನ್ನು ಎಂಟನೂರು ವರ್ಷಗಳ (12ನೇ ಶತಮಾನ) ಹಿಂದೆಯೇ ಬಸವೇಶ್ವರರು ಅನುಷ್ಠಾನದಲ್ಲಿ ತರಲು ಪ್ರಯತ್ನಿಸಿದುದು ಸೂರ್ಯನ ಪ್ರಕಾಶದಷ್ಟೇ ಸತ್ಯವಾದುದು. ಅದನ್ನು ಈ ಕೆಳಕಾಣಿಸಿದಂತೆ ನೋಡೋಣ.

**ದಯೆ ಹಾಗೂ ಅನುಕಂಪ**

ಸೃಷ್ಠಿಯಲ್ಲಿ ಜನಿಸಿದ ಎಲ್ಲ ಜೀವಿಗಳಿಗೂ ಜೀವಿಸುವ ಹಕ್ಕಿದೆ, ಅದನ್ನು ಯಾರು ಕಸಿದುಕೊಳ್ಳಲು ಸಾಧ್ಯವಿಲ್ಲ ಎಂದು ಹೇಳಿದ ಬಸವಣ್ಣನವರು ಯಾವುದೇ ಧರ್ಮ ಹಿಂಸೆಯನ್ನು ಒಪ್ಪುವುದಿಲ್ಲವೆಂದು ಪ್ರತಿಪಾದಿಸಿದರು. ದೇವರು ಹಿಂಸೆಯನ್ನು ಬಯಸುವುದಿಲ್ಲ ; 'ಎಲ್ಲ ಧರ್ಮಗಳ ಮೂಲ ಅಹಿಂಸೆ', "ದಯವೇ ಧರ್ಮದ ಮೂಲವಯ್ಯಾ" ಎಂದು ಸಾರಿದ ಅವರ ವಿಚಾರ ಮಾನವತಾವಾದಕ್ಕೊಂದು ನಿದರ್ಶನ. ಬಸವಣ್ಣನವರು ವೇದಶಾಸ್ತ್ರಗಳ ತಪ್ಪು ನಡುವಳಿಕೆಯನ್ನು ದಿಟ್ಟತನದಿಂದ ವೈಚಾರಿಕ ತಳಹದಿಯ ಮೇಲೆ ಖಂಡಿಸಿದರು. ಯಜ್ಞ–ಯುಗಾದಿಗಳಲ್ಲಿ ಆಹುತಿ ಕೊಡುವುದಕ್ಕಾಗಿ ಎಳೆದೊಯ್ಯುತ್ತಿರುವ ಕುರಿಮರಿಯ ನಿಸ್ಸಾಹಾಯಕ ಆಕ್ರಂದನವನ್ನು ಕೇಳಿ ಅವರ ಹೃದಯ ಮಮ್ಮಲನೆ ಮರುಗಿತು. ಯಾವುದೇ ಜೀವಿಯನ್ನು ಯಾವುದೇ ಕಾರಣಕ್ಕೂ ಹಿಂಸಿಸಬಾರದೆಂಬ ಮನೋಭಾವನೆ ಅವರದಾಗಿತ್ತು. ಆದ್ದರಿಂದಲೇ ಅವರನ್ನು ಜಾಗತಿಕ ಮಹಾ ಮಾನವತಾವಾದಿಗಳ ಪಂಕ್ತಿಯಲ್ಲಿ ಅಗ್ರಗಣ್ಯವಾಗಿಸಿದೆ.

ದಯವಿಲ್ಲದ ಧರ್ಮಗಳನ್ನು ವಚನಗಳಲ್ಲಿ ಹೀಗೆ ಖಂಡಿಸಿದ್ದಾರೆ

***"ಕಲ್ಲನಾಗರ ಕಂಡರೆ ಹಾಲನೆರೆಯೆಂಬರು ;***
***ದಿಟನಾಗರ ಕಂಡರೆ ಕೊಲ್ಲೆಂಬರು ;***
***ಉಂಬುವ ಜಂಗಮ ಬಂದರೆ ನಡೆಯೆಂಬರು ;***
***ಉಣ್ಣದಾ ಲಿಂಗಕ್ಕೆ ಬೋನವ ಹಿಡಿಯೆಂಬರು"***

ಈ ವಚನದಲ್ಲಿ ಬಸವಣ್ಣನವರ ಪ್ರಾಣಿದಯೆ ಸ್ಪಷ್ಟವಾಗಿ ವ್ಯಕ್ತವಾಗಿದೆ. ಜಂಗಮರೆಂದರೆ, ಅಲ್ಲಿ ಯಾವುದೇ ಒಬ್ಬ ವಿಶಿಷ್ಠ ವ್ಯಕ್ತಿಯಾಗಿರದೆ, ಪ್ರಾಣಿ, ಪಕ್ಷಿ ಮೊದಲು ಮಾಡಿಕೊಂಡು ಎಲ್ಲ ಜಂಗಮರು ಸಾಮಾನ್ಯ ಜನರ ಸ್ವರೂಪ. ಇವರನ್ನು ಕಾರುಣ್ಯದಿಂದ ಕಾಣುವುದೇ ಧರ್ಮ. ಮಾನವನ ನಡೆ–ನುಡಿ ಶುದ್ಧವಾಗಿರಬೇಕೆಂಬುದನ್ನು ಕೂಡ ಬಸವೇಶ್ವರರ ಇನ್ನೊಂದು ವಚನದಲ್ಲಿ ಈ ಕೆಳಗಿನಂತೆ ಕಾಣಬಹುದು.

***"ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ***
***ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ***
***ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ***
***ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ***
***ಇದೇ ನಮ್ಮ ಕೂಡಲಸಂಗಮದೇವನೊಲಿಸುವ ಪರಿ"***

ಈ ವಚನದ ಮೂಲಕ ಮನುಷ್ಯನ ಅಂತರಂಗ ಬಹಿರಂಗ ಎರಡರಲ್ಲಿಯೂ ಶುದ್ಧವಿರಬೇಕು ಎಂದು ಹೇಳಿದ್ದಾರೆ. ಆಚಾರ–ವಿಚಾರ, ನಡೆ–ನುಡಿಗಳು ಶುದ್ಧವಾಗಿರಬೇಕಾದರೆ ನೈತಿಕ ಜೀವನ ಸುಖಮಯ ವಾಗಿರುವುದು. ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯನ್ನು ಹೇಗೆ ಆದರದಿಂದ ಕಾಣಬೇಕು ಎಂಬುದನ್ನು ಇವರ ಇನ್ನೊಂದು ವಚನದಲ್ಲಿ ಕಾಣಬಹುದು.

***"ಏನು ಬಂದಿರಿ ಹದುಳವಿದ್ದರೆ ?***
***ಎಂದರೆ ನಿಮ್ಮ ಮೈಸಿರಿ ಹಾರಿಹೋಗುವದೆ ?***
***ಕುಳ್ಳಿರೆಂದರೆ ನೆಲ ಕುಸಿದು ಹೋಗುವುದೆ ?***
***ಒಡನೆ ನುಡಿದರೆ ಶಿರಹೊಟ್ಟೆಯೊಡೆಯುವುದೇ ?***
***ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿರ್ದಡೆ ಕೆಡವಿ***
***ಮೂಗಕೊಯ್ಯದೆ ಮಾಣ್ಬನೆ ಕೂಡಲಸಂಗಮದೇವನು ?"***

ಹಾಗೆಯೇ ಕೈಲಾಸ, ವೈಕುಂಠ, ಸ್ವರ್ಗಗಳೆಂಬ ಬೇರಾವುದೋ ಲೋಕದಲ್ಲಿ ಬದುಕುವ ನಿರರ್ಥಕ ಪ್ರಯತ್ನವನ್ನು ಬಿಟ್ಟು ಅವುಗಳನ್ನು ಈ ಲೋಕದಲ್ಲಿಯೇ ಕಾಣುವ ಸಂಕಲ್ಪ ಮಾಡಬೇಕು ಎಂದು ಬಸವಣ್ಣನವರು ಮತ್ತೆ ಮಾನವತಾವಾದವನ್ನು ತಮ್ಮ ಇನ್ನೊಂದು ವಚನದಲ್ಲಿ ವ್ಯಕ್ತಪಡಿಸಿದ್ದಾರೆ.

***"ದೇವಲೋಕ ಮೃರ್ತ್ಯ ಲೋಕವೆಂಬುದು ಬೇರಿಲ್ಲ***
***ಕಾಣಿಬೋ ! ಸತ್ಯ ನುಡಿಯುವದೇ ದೇವಲೋಕ***
***ಮಿಥ್ಯವ ನುಡಿಯುವದೇ ಮೃರ್ತ್ಯಲೋಕ***
***ಆಚಾರವೇ ಸ್ವರ್ಗ ; ಅನಾಚಾರವೇ ನರಕ***
***ಕೂಡಲಸಂಗಮದೇವ ನೀವೇ ಪ್ರಮಾಣ"***

ಹೀಗೆ ಬಸವಣ್ಣನವರು ಹುಟ್ಟಿದ ಪ್ರತಿಯೊಬ್ಬ ವ್ಯಕ್ತಿ ಸ್ವತಂತ್ರವಾಗಿ ಸಮಾನವಾಗಿ ಬದುಕಬೇಕು ಎಲ್ಲ ಹಕ್ಕುಗಳಿಗೆ ಎಲ್ಲರೂ ಬಾಧ್ಯರು. ಗುಲಾಮಗಿರಿ ಸಲ್ಲದು ಪ್ರತಿಯೊಬ್ಬನಿಗೂ ಗುಣಮೂಲವಾದ ಸ್ಥಾನ ದೊರೆಯಬೇಕು, ಯಾರನ್ನೂ ಅಮಾನುಷವಾಗಿ ಶಿಕ್ಷಿಸಬಾರದು ಎಲ್ಲರಿಗೂ ವೈಚಾರಿಕ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ನೀಡಬೇಕು. ದುಡಿಮೆಗೆ ತಕ್ಕ ಫಲ ದೊರೆಯಬೇಕು. ಒಟ್ಟಾರೆ ಮನುಷ್ಯ ಪ್ರಾಮಾಣಿಕವಾದ ಬದುಕನ್ನು ಅನುಭವಿಸಬೇಕೆಂಬ ಅಭಿಲಾಷೆಯನ್ನು ಬಸವಣ್ಣನವರು ಹೊಂದಿದ್ದರು. ಅದುವೇ ಅವರ ಮಾನವತಾವಾದದ ನಿದರ್ಶನವಾಗಿದೆ.

**ಸಾಮಾಜಿಕ ಸಮಾನತೆ :**

ಬಸವಣ್ಣನವರ ಮಾನವತಾವಾದವನ್ನು ಅವರು ಪ್ರತಿಪಾದಿಸಿದ ಸಾಮಾಜಿಕ ಸಮಾನತೆ ತತ್ವದಲ್ಲಿಯೂ ಕಾಣಬಹುದಾಗಿದೆ. ಅಂದಿನ ಸಮಾಜದಲ್ಲಿ ಬೇರೂರಿದ್ದ ಜಾತಿಬೇಧ, ಅಸಮಾನತೆಯನ್ನು ಸಾಂಪ್ರದಾಯಿಕ ಕಟ್ಟುಪಾಡುಗಳನ್ನು ಹೊಡೆದೋಡಿಸಿ, ಸಮಾನತೆಯನ್ನು ತರಲು ಯತ್ನಿಸಿದರು. ಸಮಾಜದಲ್ಲಿ ಉಚ್ಚ–ನೀಚ ಎಂಬ ತಾರತಮ್ಯ ಇರಕೂಡದೆಂದು ಎಲ್ಲರೂ ಸರಿಸಮಾನರು ; ಜಾತಿ, ಮತ, ಗೋತ್ರ ಮೊದಲಾದ ಅನಿಷ್ಟಗಳು ಮಾನವ ನಿರ್ಮಿತವಾದವು ದೇವ ನಿರ್ಮಿತವಲ್ಲ ಎಂದು ಅರುಹಿದರು. ಅದನ್ನು ಅವರ ಈ ಕೆಳಗಿನ ವಚನದಲ್ಲಿ ಕಾಣಬಹುದು.

***"ಕೊಲ್ಲುವವನೇ ಮಾದಿಗ ;***
***ಹೊಲಸು ತಿಂಬುವವನೇ ಹೊಲೆಯ ;***
***ಕುಲವೇನೋ, ಆವಂದಿರ ಕುಲವೇನೋ ?***
***ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವ ನಮ್ಮ***
***ಕೂಡಲಸಂಗಮನ ಶರಣರೇ ಕುಲಜರು".***

ಈ ರೀತಿ ಅವರವರ ಯೋಗ್ಯತೆ ಮತ್ತು ನಡತೆಯ ಮೇಲೆ ಅವರವರ ವ್ಯಕ್ತಿತ್ವ ಅಳೆಯಬೇಕೇ ಹೊರತು ಕೇವಲ ಹುಟ್ಟಿನಿಂದಲ್ಲ. ಈ ಬೋಧನೆಯಲ್ಲಿ ಅವರ ಮಾನವತಾವಾದವನ್ನು ಕಾಣಬಹುದು.

ಬಸವಣ್ಣನವರು ಯಾರನ್ನು ವಿಶ್ವಕುಟುಂಬದ ತತ್ವದಿಂದ ಹೊರಗಿಡಲಿಲ್ಲ. ಈ ದಿಸೆಯಲ್ಲಿ ಅವರ ದಿವ್ಯ ಸಂದೇಶವೆಂದರೆ–

**"ಇವನಾರವ ಇವನಾರವ ಇವನಾರವನೆಂದನಿಸದಿರಯ್ಯಾ !**
**ಇವನಮ್ಮವ ಇವನಮ್ಮವನೆಂದಿನಿಸಯ್ಯಾ**
**ಇವ ನಮ್ಮ ಮನೆ ಮಗನೆಂದಿನಿಸಯ್ಯಾ ಕೂಡಲಸಂಗಮದೇವ"**

ಅವರ ಈ ಸಂದೇಶವನ್ನು ಆಚರಣೆಯಲ್ಲಿ ತರುವುದಾದರೆ ಇಡೀ ವಿಶ್ವದ ಸಮಸ್ಯೆಗಳು ತಾವಾಗಿಯೇ ಪರಿಹಾರವಾಗುತ್ತವೆ.

**ಸ್ತ್ರೀ ಸ್ವಾತಂತ್ರ್ಯ**

ಮನು ತನ್ನ ಸ್ಮೃತಿಯಲ್ಲಿ ಹೇಳಿರುವಂತೆ "ನ ಸ್ತ್ರೀ ಸ್ವಾತಂತ್ರ್ಯಂ ಅರ್ಹತಿ" ಎಂಬ ಹೇಳಿಕೆಯನ್ನು ವಿರೋಧಿಸುವಂತೆ 12ನೇ ಶತಮಾನದಲ್ಲಿ ಬಸವಣ್ಣನವರು ಸ್ತ್ರೀಯರಿಗೆ ಧಾರ್ಮಿಕ ಸ್ವಾತಂತ್ರ್ಯವನ್ನು ನೀಡಿದರು. ಮುಕ್ತಮನಸ್ಸಿನಿಂದ ಪ್ರಾರ್ಥನೆಗಳಲ್ಲಿ, ಚರ್ಚೆಗಳಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಿದರು. ಅನುಭವ ಮಂಟಪದ ಅನುಭವಗೋಷ್ಠಿಯಲ್ಲಿ ಸ್ತ್ರೀಯರಿಗೂ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಲು ಅವಕಾಶ ಕಲ್ಪಿಸಿ ಕೊಟ್ಟರು. ಬಸವಣ್ಣನವರು ಪುರುಷರನ್ನು ಹೇಗೆ ಪೂಜ್ಯಭಾವದಿಂದ ಕಾಣುತ್ತೀರೋ ಹಾಗೇ ಸ್ತ್ರೀಯರನ್ನು ಪೂಜ್ಯಭಾವನೆಯಿಂದ ಕಾಣಬೇಕು ಎಂದು ಪ್ರತಿಪಾದಿಸಿದರು. ಅದರಂತೆಯೇ ನಡೆದರು.

***"ಹೆಣ್ಣನ್ನು ತಾಯಿಯೆಂದೇ ನೋಡಬೇಕಲ್ಲದೆ ;***
***ಬೇರೆ ಕಣ್ಣುಗಳಿಂದ ನೋಡಬಾರದು***
***ಮಾತೆ ಎಂಬ ಭಾವ ತಪ್ಪಿ ಅಪ್ಪಿದವರ***
***ತಲೆಯಕೊಂಬ ಕೂಡಲಸಂಗಮದೇವ***
***ಪರವಧು ಮಹಾದೇವಿ ಎಂಬೆ"***

ಎಂಬ ಬಸವಣ್ಣನವರ ವಾಣಿಯಲ್ಲಿ ಮಾನವತೆ ಒಡಮೂಡಿ ಬಂದಿದೆ. ಈ ಸಮಾನತೆ ಸ್ವಾತಂತ್ರ್ಯತೆಯ ಕಾರಣವಾಗಿಯೇ 12ನೇ ಶತಮಾನದಲ್ಲಿ ಅಕ್ಕಮಹಾದೇವಿ, ಆಯ್ದಕ್ಕಿ ಲಕ್ಕಮ್ಮ, ಲಿಂಗಮ್ಮ, ಅಕ್ಕನಾಗಮ್ಮ, ಸತ್ಯಕ್ಕ ಮುಂತಾದವರು ಧಾರ್ಮಿಕ ಹಾಗೂ ಸಾಮಾಜಿಕ ರಂಗದಲ್ಲಿ ಬೆಳಗಿದರು.

**ಅಹಂಕಾರ ನಿರಸನ**

ಬಸವಣ್ಣನವರು ಭಕ್ತಿಭಂಡಾರಿಯಾಗಿದ್ದರೂ, ಮಹಾಮಂತ್ರಿಯಾಗಿದ್ದರೂ, ವಿನಯವಂತಿಕೆ, ಸಜ್ಜನಿಕೆ ಅವರ ಗುಣರತ್ನವಾಗಿತ್ತು. ಇದನ್ನು "ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ" ಎನ್ನುವ ಅವರ ಮಾತಿನಲ್ಲಿ ಕಾಣಬಹುದು. ಶರಣ ಹರಳಯ್ಯ ಹಾಗೂ ಆತನ ಹೆಂಡತಿ ತಮ್ಮ ತೊಡೆಯ ಚರ್ಮದಿಂದ ಬಸವಣ್ಣನಿಗೆ ಪಾದರಕ್ಷೆಗಳನ್ನು ಮಾಡಿಕೊಂಡು ಬಂದು ಕೈಯಲ್ಲಿ ಕೊಟ್ಟಾಗ, ಬಸವಣ್ಣನವರು ಆ ಪಾದರಕ್ಷೆಗಳನ್ನು ಕಾಲಲ್ಲಿ ಹಾಕಿಕೊಳ್ಳದೇ ತಲೆಯ ಮೇಲೆ ಹೊತ್ತು ಸಂತೋಷದಿಂದ ಕುಣಿದಾಡಿದರಂತೆ. ಈ ಪ್ರಸಂಗ ಜಾಗತಿಕ ಮಾನವ ಚರಿತ್ರೆಯಲ್ಲಿ ಸುವರ್ಣಾಕ್ಷರಗಳಿಂದ ದಾಖಲಿಸಬಹುದು. ವಿನಯಶೀಲತೆ ಸ್ವರ್ಗಪ್ರಾಪ್ತಿಯ ಸಾಧನ ಎಂದು ಬಸವಣ್ಣನವರು ಹೇಳಿದ್ದಾರೆ.

**"ಮೃದುವಚನಗಳೆ ಸಕಲ ಜಪಂಗಳಯ್ಯ ;**

**ಸದುವಿನಯವೇ ಸದಾಶಿವನ ಒಲುಮೆಯಯ್ಯಾ".**

ಮಾತಿನಲ್ಲಿರಬೇಕಾದ ಮಾಧುರ್ಯತೆ, ಸದುವಿನಯವೇ ಸದಾಶಿವನಿಗೆ ಪ್ರಿಯವೆಂದು ಹೇಳಿದ್ದಾರೆ. "ಅಯ್ಯಾ ಎಂದೆಡೆ ಸ್ವರ್ಗ, ಎಲವೋ ಎಂದಡೆ ನರಕ" ಇತ್ಯಾದಿ ಅವರ ಮಾತುಗಳು ಇದಕ್ಕೆ ಸಾಕ್ಷಿಯಾಗಿವೆ. ಬಡವ–ಬಲ್ಲಿದ, ಉಳ್ಳವರು–ಇಲ್ಲದವರೂ ಎಂಬ ಬೇಧ ಹೋಗಲಾಡಿಸಲು ಬಸವಣ್ಣನವರು ಬಹಳ ಪರಿಶ್ರಮಪಟ್ಟರು.

***"ಹಾವು ತಿಂದವರ ನುಡಿಸಬಹುದು***

***ಸಿರಿಗರ ಹೊಡೆದವರನ್ನು ಸಾಧ್ಯವಿಲ್ಲ***

***ಬಡತನವೆಂಬ ಮಂತ್ರವಾದಿ ಹೋಗಲು***

***ಒಡನೆ ನುಡಿವರಯ್ಯಾ ಕೂಡಲಸಂಗಮದೇವಾ"***

ಎಂದು ಶ್ರೀಮಂತರ ಅಹಂಕಾರಕ್ಕೆ ಚಾಟಿಯ ಏಟು ಕೊಟ್ಟಿರುವರು. ಬಡವರಲ್ಲಿಯೇ ಕಡುಬಡವ ನಾನೆಂದು ಹೇಳಿಕೊಳ್ಳುತ್ತಿದ್ದರು. ಶ್ರೀಮಂತಿಕೆಯ ಆಡಂಬರಕ್ಕೆ ದೇವನೊಲಿಯುವದಿಲ್ಲ ;

***"ಉಳ್ಳವರು ಶಿವಾಲಯ ಮಾಡುವರಯ್ಯಾ !***

***ನಾನೇನು ಮಾಡಲಿ ಬಡವನಯ್ಯಾ***

ಎಂದು ಕೂಡಲಸಂಗಮನಲ್ಲಿ ಮೊರೆ ಇಟ್ಟಿರುವರು. ಸಾಮಾನ್ಯ ವ್ಯವಹಾರದಲ್ಲಿ ಕೂಡ ಒಬ್ಬರಿಗೆ ಒಂದು ಬಿರುಸು ಮಾತಾಡಲು ಅವರ ಮನಸ್ಸು ಅಳುಕುತಿತ್ತು.

**ಕಾಯಕ ಸಿದ್ಧಾಂತ**

ಬಸವಣ್ಣನವರು ಪ್ರತಿಯೊಬ್ಬನೂ ಒಂದಿಲ್ಲೊಂದು ಕಾಯಕವನ್ನು ಮಾಡಬೇಕು ಎಂದು ಹೇಳುತ್ತಾರೆ. ಕಾಯಕವನ್ನು ಧಾರ್ಮಿಕ ಮತ್ತು ಆಧ್ಯಾತ್ಮಿಕ ನೆಲೆಯಿಂದ ನೋಡಿ ಅದಕ್ಕೆ ಜೀವನದ ಮೌಲ್ಯವನ್ನು ಒದಗಿಸಿದ್ದಾರೆ. ವೈಯಕ್ತಿಕ ಮೋಕ್ಷದಲ್ಲಿ ಅವರಿಗೆ ಆಸೆ ಇರಲಿಲ್ಲ ; ಸಾಮಾಜಿಕ ಪಿಡುಗುಗಳನ್ನು ಹೋಗಲಾಡಿಸುವದು ಅವರ ಗುರಿಯಾಗಿತ್ತು. ಆದ್ದರಿಂದಲೇ ಅವರು "ಕಾಯಕವೇ ಕೈಲಾಸ" ಎಂದು

ಎಚ್ಚರಿಸಿದರು. ಯಾವುದೇ ಕೆಲಸ ಸಣ್ಣದಿರಲಿ, ದೊಡ್ಡದಿರಲಿ ಮಾಡುವಾಗ ಶ್ರದ್ಧೆಬೇಕು, ನಿಷ್ಠೆಬೇಕು. ಅದರಿಂದ ಯಶಸ್ಸು ಕಾಣುತ್ತೇವೆ. ಯಶಸ್ಸು ತೃಪ್ತಿಯನ್ನುಂಟು ಮಾಡುತ್ತದೆ ; ತನ್ನ ಕೆಲಸ ತನಗೆ ತೃಪ್ತಿ ನೀಡಿದರೆ ಸಕಲರಿಗೆ ತೃಪ್ತಿ ನೀಡುತ್ತದೆ. ಕಾಯಕದಲ್ಲಿ ಶ್ರದ್ಧೆ, ನಿಷ್ಠೆ ಇರದಿದ್ದರೆ ತೃಪ್ತಿ ಲಭಿಸುವುದಿಲ್ಲ.

ಕಾಯಕ ಅಂದರೆ, ವ್ಯಕ್ತಿಯು ತನಗಾಗಿ ಮತ್ತು ಸಮಾಜಕ್ಕಾಗಿ ಅರ್ಪಣಾಭಾವದಿಂದ ಕೈಗೊಳ್ಳುವ ಕಾರ್ಯ. ಕಾಯಕ ಧಾರ್ಮಿಕ ಕಾರ್ಯ; ಅದು ನೀತಿಬಾಹಿರವಾಗಿರಬಾರದು. ನಾಳಿನ ಬಾಳಿಗಾಗಿ ಸಂಗ್ರಹಿಸಿಡುವುದು ಕಾಯಕದ ಉದ್ದೇಶವಾಗಿರಬಾರದು. ಇಲ್ಲಿ ಅಸಂಗ್ರಹ ತತ್ವದ ಅಂಗೀಕಾರವಿದೆ.

***"ಕಂಡವರನ್ನು ಬೇಡಿತರುವುದು ಕಾಯಕವಲ್ಲ ;***

***ಬೇಡಿಕೊಂಡು ತಿನ್ನುವುದು ಪರಪೀಡನೆಯೇ ಹೊರತು ಕಾಯಕವಲ್ಲ***

***ಕಾಯಕವು ಅನಿರ್ಭಂಧಿತವಾದುದು ಆಗಿದೆ;"***

ತಮ್ಮ ಇಚ್ಛೆ, ಸಾಮರ್ಥ್ಯ ಹಾಗೂ ಅವಕಾಶವನ್ನು ಆಧರಿಸಿ ಯಾರು ಯಾವ ಕಾಯಕವನ್ನಾದರೂ ಕೈಗೊಳ್ಳಬಹುದು. ಇಂತಹ ಕಾಯಕ ತತ್ವದ ಕಲ್ಪನೆ, ಸಾಮಾಜಿಕ ಸಮಾನತೆ, ಲಿಂಗ ಸಮಾನತೆ ತಂದುಕೊಟ್ಟು ಬೇಗನೆ ಜನಪ್ರಿಯವಾಯಿತು. ಸಹಸ್ರಾರು ಮಂದಿ ಬಸವಣ್ಣನವರು ಬೋಧಿಸಿದ ಕಾಯಕ ಮಾರ್ಗವನ್ನೇ ಅನುಸರಿಸತೊಡಗಿದರು. ಕಾಯಕ ತತ್ವವು ಎತ್ತಿಹಿಡಿದಿರುವ ಶ್ರಮಜೀವನದ ಮಹತ್ವವನ್ನು ಜಗತ್ತಿನಾದ್ಯಂತ ಹಲವಾರು ಮಹಾನುಭಾವರು ಕೊಂಡಾಡಿದ್ದಾರೆ.

**ಅಸ್ಪೃಶ್ಯರ ಉದ್ಧಾರ**

ಬಸವಣ್ಣನವರ ಮಾನವತೆ ಎದ್ದುಕಾಣುವುದು ಅಸ್ಪೃಶ್ಯತೆಯನ್ನು ತೊಡೆದುಹಾಕುವಲ್ಲಿ. ನೆಲವಾಗಲಿ, ಜಲವಾಗಲಿ, ಮನುಷ್ಯರಾಗಲಿ, ಅವರ ಕೃತಿಗಳಾಗಲಿ ಅವುಗಳನ್ನು ವಿಭಜಿಸಿ ಏಣಿ–ಶ್ರೇಣಿಗೊಳಿಸಿ ಮೌಲ್ಯಾರೋಪಣ ಮಾಡಿ ಒಂದು ಇನ್ನೊಂದಕ್ಕಿಂತ ಶ್ರೇಷ್ಠ–ಕನಿಷ್ಠ ಎನ್ನುವುದು ತಪ್ಪು.

***"ನೆಲವೊಂದೇ ಹೊಲಗೇರಿ ಶಿವಾಲಯಕ್ಕೆ***

***ಜಲವೊಂದೇ ಶೌಚಾಚಮನಕ್ಕೆ***

***ಕುಲವೊಂದೆ ತನ್ನ ತಾನರಿದವಂಗೆ***

***ಫಲವೊಂದೆ ಷಡುದರುಶನ ಮುಕ್ತಿಗೆ***

***ನಿಲವೊಂದೆ ಕೂಲಡಸಂಗಮದೇವಾ***

***ನಿಮ್ಮನ್ನರಿದವಂಗೆ"***

ಕುಲ ಹಲವಾಗಿ ಛಿದ್ರಿಸಿದರೆ ಆ ಸೃಷ್ಟಿಕರ್ತನಿಗೆ ದ್ರೋಹಬಗೆದಂತಾಗುವುದೆಂದು ಅವರ ಅನಿಸಿಕೆಯಾಗಿತ್ತು.

***"ಕಾಸಿ ಕಮ್ಮಾರನಾದ ; ಬೀಸಿ ಮಡಿವಾಳನಾದ***

***ಹಾಸನಿಕ್ಕಿ ಸಾಲಿಗನಾದ ; ವೇದವನೋದಿ ಹಾರುವನಾದ"***

ಕಮ್ಮಾರಿಕೆಯಾಗಲಿ, ಚರ್ಮಹದಮಾಡುವುದಾಗಲಿ, ಹೂ–ಪತ್ರಿಗಳನ್ನು ಎತ್ತಿಕೊಂಡು ಬರುವದಾಗಲಿ ಪವಿತ್ರ ಕೆಲಸಗಳೇ. ಆಯಾ ಕಾಯಕವನ್ನು ಒಂದು ಜಾತಿ ಎಂದು ಬಗೆಯುವುದು ಸಲ್ಲದ ಮಾರ್ಗವೆಂದು

ಬಸವಣ್ಣನವರು ಮಾನವತೆಗೆ ಮಹತ್ವ ನೀಡಿದರು. ಪರಂಪರೆಯಿಂದ ಆಚರಣೆಯಲ್ಲಿದ್ದ ಜಾತಿ ಪದ್ಧತಿಯನ್ನು ಮಡಿ–ಮೈಲಿಗೆಗಳನ್ನು ಅಮಾನವೀಯವೆಂದು ಬಸವಣ್ಣನವರು ತೋರಿಸಿಕೊಟ್ಟಿದ್ದಾರೆ. ಅಷ್ಟೇ ಅಲ್ಲ ; ಅಶ್ಪೃಶ್ಯರನ್ನು ತಮ್ಮ ಧರ್ಮದಲ್ಲಿ ಸೇರಿಸಿಕೊಂಡು ಅವರಿಗೆ ಧಾರ್ಮಿಕ, ಸಾಮಾಜಿಕ ಸ್ವಾತಂತ್ರ್ಯ ನೀಡಿದರು. ಅವರಿಗೆ ವ್ಯಕ್ತಿ ಸ್ವಾತಂತ್ರ್ಯದ ಮಹತ್ವದ ಕಲ್ಪನೆ ತಂದುಕೊಟ್ಟರು.

**ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ**

ಬಸವಣ್ಣನವರು ಈ ಪ್ರಪಂಚವನ್ನು ದೇವರ ಸೃಷ್ಟಿ ಎಂದು ನಂಬಿದರು. ಇದು ಸತ್ಯವಾಗಿದೆಯೇ ಹೊರತು ಮಿಥ್ಯವಾಗಿಲ್ಲ. ಪ್ರತಿಯೊಬ್ಬ ಮಾನವನಿಗೂ ತನ್ನಲ್ಲಿರುವ ದೈವಿ ಅಂಶವನ್ನು ಪ್ರಕಟಗೊಳಿಸಲು ಈ ಪ್ರಪಂಚವಿದೆ. ಇದು ಕರ್ತಾರನ ಕಮ್ಮಟ ಇಲ್ಲಿ ಸಾಧಕನು ಉತ್ತಮವಾಗಿ ಹೊರಬಂದರೆ ; ಆತನು ಸ್ವರ್ಗದಲ್ಲಿಯೂ ಸ್ವೀಕಾರನಾಗಿರುತ್ತಾನೆ ಎನ್ನುವ ಭರವಸೆಯನ್ನು ಜನಕ್ಕೆ ಬಸವಣ್ಣನವರು ನೀಡಿದರು.

***"ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ ;***
***ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ ;***
***ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ........"***

ಎಂದು ಬಸವಣ್ಣನವರು ಮರ್ತ್ಯಲೋಕದ ಮಹಿಮೆಯನ್ನು ಮಾನವ ಜನ್ಮದ ಹಿರಿಮೆಯನ್ನು ಎತ್ತಿ ಹಿಡಿದಿದ್ದಾರೆ. ಸಾಮಾನ್ಯ ಜನತೆಯನ್ನು ವಂಚಿಸುವ ಸಲುವಾಗಿ ಪುರೋಹಿತಷಾಹಿ ಸೃಷ್ಟಿಸಿದ ಸ್ವರ್ಗ ನರಕಗಳನ್ನು ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸಿ ; ಭೂಮಿಯಲ್ಲಿಯೇ ಸ್ವರ್ಗವನ್ನು ಸ್ಥಾಪಿಸಿದ ಮಹಾನುಭಾವರು ಬಸವಣ್ಣನವರು.

**ಸಮಾರೋಪ**

ಹೀಗೆ ಬಸವಣ್ಣನವರು "ನುಡಿದಂತೆ ನಡೆದವರು" "ಸದುವಿನಯವೇ ಸದಾಶಿವನ ಒಲುಮೆ" ಎಂದು ಭಾವಿಸಿದ ವಿನಯಶೀಲವ್ಯಕ್ತಿ. ಧರ್ಮವನ್ನು ಮಾನವೀಯತೆ ತಳಹದಿಯ ಮೇಲೆ ನಿಲ್ಲಿಸಲು ಅವರು ಸಮರ್ಥರಾದರು. ಬಸವಣ್ಣನವರು ಬೋಧಿಸಿದ ವಿಚಾರಗಳು ಮಾನವೀಯತೆ ಆಧಾರವುಳ್ಳವುಗಳು ಬಸವಣ್ಣನವರು ಗಟ್ಟಿಯಾಗಿ ಹಿಡಿದದ್ದು ಯಾವುದೇ ಗ್ರಂಥಗಳನ್ನಲ್ಲ ಜೀವನದ ಮೂಲಭೂತ ಮೌಲ್ಯಗಳನ್ನು ; ಇವುಗಳ ಆಧಾರದ ಮೇಲೆ ಅವರ ಧರ್ಮ ಬೆಳೆಯಿತು. ಹೀಗೆ ಎಲ್ಲಾ ಕ್ಷೇತ್ರದಲ್ಲಿಯೂ ಮಾನವನ ಹಿತವನ್ನೇ ಬಯಸಿದ ಬಸವಣ್ಣನವರು ಸಮಸ್ತ ಮಾನವ ಕುಲದ ಉದ್ಧಾರಕ್ಕೆ ಕಾರಣರಾದರು. ಅವರದು ಸಂಪೂರ್ಣವಾಗಿ ಮಾನವತಾ ದೃಷ್ಟಿ. ಅಪಾರವಾದ ಮಾನವೀಯ ಅನುಕಂಪನೆಯಿಂದ ಪ್ರೇರಿತರಾದರು. ಅಂತೆಯೇ ಬಸವಣ್ಣನವರನ್ನು ಮಹಾಮಾನವತಾವಾದಿ, ವಿಶ್ವ ಬಂಧು ಅಥವಾ ಚೇತನ ಎಂದು ಗೌರವಿಸಲಾಗುತ್ತದೆ. ಇಂತಹ ವಿನೂತನ ವಿಶ್ವಮಾನವ ಪ್ರೇಮಿ ಮತ್ತೊಮ್ಮೆ ಹುಟ್ಟಿ ಬರುವುದು ಅತಿವಿರಳ.

**ಪರಾಮರ್ಶನ ಗ್ರಂಥಗಳು**


- ಅಯ್ಯನಗೌಡ್ರ, ಎಸ್.ವ್ಹಿ. (2014). ಆಧುನಿಕ ಜಗತ್ತಿಗೆ ಶ್ರೀ ಬಸವೇಶ್ವರರ ಹೊಸ ಸಂದೇಶ.
- ಚಂದ್ರಶೇಖರ ವಸ್ತ್ರದ. (1988). ಮಾನವತಾವಾದಿ ಬಸವಣ್ಣನವರು.

- ಹೂಗಾರ ಎಂ.ಬಿ. (1990). ಶರಣರ ಆಂದೋಲನ ಹಾಗೂ ಹೊಸ ಸಮಾಜದ ಪರಿಕಲ್ಪನೆ.
- ನಾಗರಾಜ ಸಿ.ಪಿ. (2018). ಶಿವಶರಣೆಯರು ವಚನಗಳ ಓದು. 75, 5ನೆಯ ಕ್ರಾಸ್ ಕೃಷ್ಣ ಗಾರ್ಡನ್ ಆರ್ ವಿ ಕಾಲೇಜ್ ಪೋಸ್ಟ್, ಬೆಂಗಳೂರು
- ಶಿವರುದ್ರಪ್ಪ ಜಿ.ಎಸ್. (2013). ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ ಸಂಪುಟ–10. ಸಪ್ನ ಬುಕ್‌ಹೌಸ್ ಬೆಂಗಳೂರು.
- ಶಾಮರಾಯ. ತ.ಸು. (2010). ಕನ್ನಡ ಸಾಹಿತ್ಯ ಚರಿತ್ರೆ. ಕನ್ನಡ ಸಾಹಿತ್ಯ ಪರಷತ್, ಬೆಂಗಳೂರು.